ರಾಜ್ಯದಲ್ಲಿ ಅಕ್ರಮ ಕಾಫಿ ತೋಟ ಕುರಿತು.

1042 - ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಾಫಿ ಬೆಳೆಗಾರರು ಅಕ್ರಮವಾಗಿ ಮಾಡಿರುವಂತಹ ಕಾಫಿ ತೋಟಗಳಿರುವ ಎಕರೆಗಳೆಷ್ಟು?

ಆ) ಕಂದಾಯ ಇಲಾಖೆಗೆ ಸೇರಿದ ಜಮೀನಿನಲ್ಲಿ ಅಕ್ರಮವಾಗಿ ಮಾಡಿರುವಂತಹ ಕಾಫಿ ಜಮೀನಿನ ವಿಸ್ತೀರ್ಣವೆಷ್ಟು?

ಇ) ಅಕ್ರಮವಾಗಿ ಕಾಫಿ ತೋಟ ಮಾಡಿರುವ ಕಾಫಿ ಬೆಳೆಗಾರರ ಸಂಖ್ಯೆ ಎಷ್ಟು?

ಈ) ಸರ್ಕಾರ ಈ ಜಮೀನುಗಳನ್ನು ಸಕ್ರಮಗೊಳಿಸಲು ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) 25,827-36 ಎಕರೆಗಳಷ್ಟು ಜಮೀನಿನಲ್ಲಿ ಚಿಕ್ಕಮಗಳೂರು, ಕೊಡಗು, ಹಾಸನ ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ಅಕ್ರಮವಾಗಿ ಕಾಫಿ ತೋಟಗಳನ್ನು ಮಾಡಿರುತ್ತಾರೆ.

ಆ) ಸದ್ಯಕ್ಕೆ ಸರ್ಕಾರದಲ್ಲಿ ಮಾಹಿತಿ ಲಭ್ಯವಿರುವುದಿಲ್ಲ.

ಇ) ಸದ್ಯಕ್ಕೆ ಸರ್ಕಾರದಲ್ಲಿ ಮಾಹಿತಿ ಲಭ್ಯವಿರುವುದಿಲ್ಲ.

ಈ) ಕಾಫಿ ಬೆಳೆಗಾಗಿ ಆಗಿರುವ ಒತ್ತುವರಿಯನ್ನು ಸಕ್ರಮಗೊಳಿಸಲು ಸಂಬಂಧಪಟ್ಟ ಕಾಯ್ದೆಗೆ ತಿದ್ದುಪಡಿ ಮಾಡುವ ಬಗ್ಗೆ ನಿರ್ಧಾರವಾದ ನಂತರ ಆಗುವ ನಿರ್ಧಾರವನ್ನನುಸರಿಸಿ ಶೀಘ್ರವಾಗಿ ಕ್ರಮ ತೆಗೆದುಕೊಳ್ಳಲಾಗುವುದು.

ರಾಜ್ಯ ಬೀಜ ನಿಗಮದಿಂದ ಸರಬರಾಜಾಗುತ್ತಿರುವ ಬೀಜಗಳು

482 - ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಬೀಜ ನಿಗಮದಿಂದ ರೈತರಿಗೆ ಸರಬರಾಜು ಮಾಡುತ್ತಿರುವ ವಿವಿಧ ತಳಿಯ ಬೀಜಗಳು ಯಾವುವು?

ಆ) ನಿಗಮದವರು ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಪಟ್ಟ ಹಾಗೆ 1995-96ನೇ ಸಾಲಿಗೆ ವಿತರಿಸಲಾದ ಶಕ್ತಿ ಮತ್ತು ಇತರ ಭತ್ತದ ಬೀಜಗಳು ಕಳಪೆ ಹಾಗೂ ಜೆಳ್ಳುಗಳಾಗಿದ್ದುದರಿಂದ ಜಿಲ್ಲೆಯಲ್ಲಿ ಪ್ರಥಮ ಭತ್ತದ ಬೆಳೆಯು ಪೂರ್ಣವಾಗಿ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದಲ್ಲಿ ಉಂಟಾದ ಒಟ್ಟು ನಷ್ಟದ ಅಂದಾಜು ಎಷ್ಟು? ಈ ಕುರಿತಾಗಿ ರೈತರಿಗೆ ಪರಿಹಾರ ನೀಡುವ ವಿಚಾರವು ಸರ್ಕಾರದ ಮುಂದೆ ಇದೆಯೇ?

ಶ್ರೀ. ಸಿ. ಬೈರೇಗೌಡ (ಕೃಷಿ ಸಚಿವರು):

ಅ) ಜಯ, ಐಆರ್.20, ಎಂ.ಆರ್. 301 (ಪುಷ್ಪ) ತೆಲ್ಲಹಂಸ ರಾಶಿ, (ಐಇಟಿ-1444) ಫಲ್ಗುಣ, ಮಹಾವೀರ (ಐಇಟಿ-770) ಬಿಸಿಟಿ-5204 (ಸಾಂಬ ಮಸೂರಿ) ಪ್ರಕಾಶ (ಪಿಇಟಿ-2254) ಮಂಗಳ (ಎಂಆರ್. 272 ಶಕ್ತಿ (ಪಿಇಟಿ-3232) ಮಂಡ್ಯ ವಿಜಯ (ಕೆಎಂ 4-6) ಮಧು (ಎಂಆರ್-136) ಪಿಆರ್-64 ಮುಕ್ತಿ(ಸಿಟಿಹೆಚ್-1) ಹೈಬ್ರಿಡ್ ಭತ್ತ, ಕೆ.ಆರ್.ಹೆಚ್-1 ಎಡಿಟಿ-36, ಅವಿನಾಶ್-1, ಅಮೃತ್.

ಆ) ಈ ವಿಷಯವು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲಾ.

ಇ) ಉದ್ಭವಿಸುವುದಿಲ್ಲಾ.

ಖಾಸಗೀ ಬಸ್ಸುಗಳ ರಾಷ್ಟ್ರೀಕರಣ ಕುರಿತು

491-ಶ್ರೀ ಕೆ.ಜಯರಾಮ ಶೆಟ್ಟಿ (ಉಳ್ಳಾಲ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1975ರ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ರಾಜ್ಯ ಸರ್ಕಾರವು ಖಾಸಗಿ ಬಸ್ಸುಗಳನ್ನು ರಾಷ್ಟ್ರೀಕೃತಗೊಳಿಸಿದ ಬಸ್ಸುಗಳ ಸಂಖ್ಯೆ ಎಷ್ಟು ಮತ್ತು ಬಸ್ ಮಾರ್ಗಗಳನ್ನು ರಾಷ್ಟ್ರೀಕೃತಗೊಳಿಸಿದವುಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿಗಳನ್ನು ಒದಗಿಸುವುದು)

ಆ) ರಾಷ್ಟ್ರೀಕೃತಗೊಳಿಸಲ್ಪಟ್ಟ ಎಲ್ಲಾ ಖಾಸಗಿ ಬಸ್‌ಗಳ ಮಾಲೀಕರುಗಳಿಗೆ ಕಾನೂನು ಪ್ರಕಾರ ಒದಗಿಸಿಕೊಡಬೇಕಾದ ಪರಿಹಾರವನ್ನು ಕೊಡಬೇಕಾದ ಹೀಗೆ ಕೊಡದೇ ಇರಲು ಕಾರಣಗಳೇನು?

ಇ) ಪರಿಹಾರ ಧನವನ್ನು ಒದಗಿಸಲು ಬಾಕಿ ಇರುವ ಬಸ್ ಮಾಲೀಕರುಗಳ ಸಂಖ್ಯೆ ಎಷ್ಟು; ಮತ್ತು ಅವರಿಗೆ ಕೊಡಬೇಕಾಗಿರುವ ಒಟ್ಟು ಮೊಬಲಗು ಎಷ್ಟು?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಮಂತ್ರಿಗಳು)

ಅ) ಇಲ್ಲ.
(ಯಾವುದೂ ಇಲ್ಲ)

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಬಿಜಾಪುರ ಜಿಲ್ಲೆಯ ಗ್ರಾಮ ಲೆಕ್ಕಿಗರು

530 - ಶ್ರೀ ರವಿಕಾಂತ್ ಎಸ್. ಪಾಟೀಲ್ (ಇಂಡಿ) : ಮಾ[illegible]ಯ ಸಚಿವರು ಈ ಕೆಳಕಂಡ ಪ್ರಶ್ನೆ ದಯವಿಟ್ಟು ಉತ್ತರಿಸುವರೆ?